# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಸರ್ಕಾರವು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಮೂಲಕ ಅನುಷ್ಠಾನಗೊಳಿಸುತ್ತಿರುವ ವಸತಿ ಯೋಜನೆಗಳನ್ನು ಯೋಜನಾವಾರು ಗುರಿ ಹಂಚಿಕೆ ಮಾಡುವ ಕುರಿತು.

---0---

ಓದಲಾಗಿದೆ:

3. 2017-18ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ-230
4. ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಇವರ ಕಚೇರಿಯ ಪತ್ರ ಸಂಖ್ಯೆ:PI RGRHCL 03 BVT 03 2017, ದಿನಾಂಕ:27.04.2017

ಪ್ರಸ್ತಾವನೆ:

ಸರ್ಕಾರವು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ ಮೂಲಕ ಈ ಕೆಳಕಂಡ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ:-

1. ಬಸವ ಗ್ರಾಮೀಣ ವಸತಿ ಯೋಜನೆ
2. ಡಾ. ಬಿ.ಆರ್ ಅಂಬೇಡ್ಕರ್ ನಿವಾಸ್ ಯೋಜನೆ (ನಗರ ಮತ್ತು ಗ್ರಾಮೀಣ)
3. ವಾಜಪೇಯಿ ನಗರ ವಸತಿ ಯೋಜನೆ
4. ದೇವರಾಜ್ ಅರಸು ವಿಶೇಷ ವಸತಿ ಯೋಜನೆ
5. ಗ್ರಾಮೀಣ ಮತ್ತು ನಗರ ನಿವೇಶನ ಯೋಜನೆ
6. ಮುಖ್ಯಮಂತ್ರಿಗಳ ಒಂದು ಲಕ್ಷ ಬೆಂಗಳೂರು ವಸತಿ ಯೋಜನೆ
7. ಪ್ರಧಾನ ಮಂತ್ರಿ ಆವಾಸ್ ಯೋಜನೆ – ಗ್ರಾಮೀಣ

2017-18ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 230 ರಲ್ಲಿ ಸರ್ಕಾರದ ವಿವಿಧ ವಸತಿ ಯೋಜನೆಗಳಿಗಾಗಿ ಒಟ್ಟಾರೆ 7ಲಕ್ಷ ಮನೆಗಳನ್ನು ಮಂಜೂರು ಮಾಡಲಾಗುವುದು. ಅವುಗಳ ಪೈಕಿ ಗ್ರಾಮೀಣ ಪ್ರದೇಶದಲ್ಲಿ 6ಲಕ್ಷ ಮನೆಗಳನ್ನು ಬೆಂಗಳೂರಿನಲ್ಲಿ ಒಂದು ಲಕ್ಷ ಮನೆಗಳನ್ನು ನಿರ್ಮಿಸಲಾಗುವುದೆಂದು ಘೋಷಣೆ ಮಾಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಪತ್ರದ ಮೂಲಕ ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಇವರು ಪ್ರಸ್ತಾವನೆ ಸಲ್ಲಿಸುತ್ತಾ, 7 ಲಕ್ಷ ಮನೆಗಳನ್ನು ಈ ಕೆಳಗಿನಂತೆ ವಿವಿಧ ಯೋಜನೆಗಳಡಿ ಗುರಿ ಹಂಚಿಕೆ ಮಾಡಿ, ಸರ್ಕಾರದ ಆದೇಶ ನೀಡುವಂತೆ ಕೋರಿರುತ್ತಾರೆ.

| ಕ್ರ ಸಂ. | ಯೋಜನೆ ಹೆಸರು | ನಿಗದಿಪಡಿಸಲಾದ ಗುರಿ |
|---|---|---|
| 1. | ಬಸವ ಗ್ರಾಮೀಣ ವಸತಿ ಯೋಜನೆ | 3,20,000 |
| 2. | ಡಾ. ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ(ಗ್ರಾಮೀಣ ಮತ್ತು ನಗರ) | 1,50,000 |
| 3. | ವಾಜಪೇಯಿ ನಗರ ವಸತಿ ಯೋಜನೆ | 1,00,000 |
| 4. | ಡಿ. ದೇವರಾಜ ಅರಸು ವಿಶೇಷ ವಸತಿ ಯೋಜನೆ | 75,000 |
| 5. | ಪ್ರಧಾನ ಮಂತ್ರಿ ಆವಾಸ್ ಯೋಜನೆ(ಗ್ರಾಮೀಣ) | 55,000 |
| | ಒಟ್ಟು | **7,00,000** |

ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ವಿವಿಧ ವಸತಿ ಯೋಜನೆಗಳಿಗೆ ಯೋಜನಾವಾರು ಗುರಿ ಹಂಚಿಕೆ ನಿಗದಿಪಡಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ವಇ 35 ಹೆಚ್ಎಹೆಚ್ 2017(3), ಬೆಂಗಳೂರು, ದಿನಾಂಕ:05.06.2017.**

ಮೇಲಿನ ಪ್ರಸ್ತಾವನೆಯ ಹಿನ್ನಲೆಯಲ್ಲಿ, 2017-18ನೇ ಸಾಲಿಗೆ ವಿವಿಧ ವಸತಿ ಯೋಜನೆಗಳಡಿ 7 ಲಕ್ಷ ಮನೆಗಳ ಹಂಚಿಕೆಯ ಗುರಿಯನ್ನು ನೀಡಲಾಗಿದೆ. ಆ ಪೈಕಿ 55,000 ಮನೆಗಳನ್ನು ಪಿಎಂಎವೈ (ಗ್ರಾಮೀಣ) ಯೋಜನೆಯಡಿ ಪರಿಗಣಿಸಲಾಗುವುದು. ಇದಕ್ಕಾಗಿ ಭಾರತ ಸರ್ಕಾರವು ನಿಗದಿಪಡಿಸಿರುವ ಪ್ರತ್ಯೇಕವಾದ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸಲಾಗುವುದು. ಬಾಕಿ ಉಳಿದ 6,45,000 ಮನೆಗಳ ಪೈಕಿ ಶೇಕಡ24.1ರಂತೆ ರಾಜ್ಯ ಸರ್ಕಾರದ ಎಲ್ಲಾ ವಸತಿ ಯೋಜನೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ವಿಶೇಷ ಘಟಕ ಯೋಜನೆ/ಗಿರಿಜನ ಉಪ ಯೋಜನೆಯಡಿ(ಎಸ್‌ಸಿಪಿ/ಟಿಎಸ್‌ಪಿ) ಮೀಸಲಿರಿಸಿ ಹಂಚಿಕೆ ಮಾಡಿದರೆ, 1.56ಲಕ್ಷ ಮನೆಗಳನ್ನು ಹಂಚಿಕೆ ಮಾಡಿದಂತಾಗುತ್ತದೆ. ವಿಶೇಷ ಘಟಕ ಯೋಜನೆ/ಗಿರಿಜನ ಉಪ ಯೋಜನಾ ಘಟಕವು (ಎಸ್‌ಸಿಪಿ/ಟಿಎಸ್‌ಪಿ) ರಾಜ್ಯ ಸರ್ಕಾರದ ಡಾ. ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾಮೀಣ ಮತ್ತು ನಗರ) ಎಂಬ ಯೋಜನೆಯಾಗಿರುತ್ತದೆ.

ಅದರಂತೆ, ಸರ್ಕಾರವು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ ಮೂಲಕ ಅನುಷ್ಠಾನಗೊಳಿಸುತ್ತಿರುವ ವಸತಿ ಯೋಜನೆಗಳಿಗಾಗಿ 6,45,000 ಮನೆಗಳ ಗುರಿಯನ್ನು ಈ ಕೆಳಗಿನಂತೆ ಹಂಚಿಕೆ ಮಾಡಿ ಆದೇಶಿಸಿದೆ:-

| ಕ್ರ. ಸಂ. | ಯೋಜನೆ ಹೆಸರು | ನಿಗದಿಪಡಿಸಲಾದ ಗುರಿ |
|---|---|---|
| 1. | ಬಸವ ಗ್ರಾಮೀಣ ವಸತಿ ಯೋಜನೆ | 3,20,000 |
| 2. | ಡಾ. ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ(ಗ್ರಾಮೀಣ ಮತ್ತು ನಗರ) | 1,56,000 |
| 3. | ವಾಜಪೇಯಿ ನಗರ ವಸತಿ ಯೋಜನೆ | 1,00,000 |
| 4. | ಡಿ. ದೇವರಾಜ ಅರಸು ವಿಶೇಷ ವಸತಿ ಯೋಜನೆ | 69,000 |
| | ಒಟ್ಟು | 6,45,000 |

ಬಸವ ವಸತಿ ಯೋಜನೆಯು ಗ್ರಾಮೀಣ ಪ್ರದೇಶಗಳಿಗೆ ಹಾಗೂ ವಾಜಪೇಯಿ ವಸತಿ ಯೋಜನೆಯು ನಗರ ಪ್ರದೇಶಗಳಿಗೆ ಸೀಮಿತವಾದ ಯೋಜನೆಗಳಾಗಿರುತ್ತವೆ. ಡಿ. ದೇವರಾಜ ಅರಸು ವಸತಿ ಯೋಜನೆಯು ವಿಶೇಷ ವರ್ಗದವರಿಗಾಗಿ ನಿಗದಿಯಾದ ಯೋಜನೆಯಾಗಿರುತ್ತದೆ. ಡಾ. ಬಿ.ಆರ್. ಅಂಬೇಡ್ಕರ್ ನಿವಾಸ್(ಗ್ರಾಮೀಣ ಮತ್ತು ನಗರ)ಯೋಜನೆಯು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಮೀಸಲಿದ್ದು ಇದನ್ನು ಹೊರತುಪಡಿಸಿ, ಉಳಿದ ಮೂರು ರಾಜ್ಯ ಸರ್ಕಾರದ ವಸತಿ ಯೋಜನೆಗಳಾದ, ಬಸವ ಗ್ರಾಮೀಣ ವಸತಿ ಯೋಜನೆ, ವಾಜಪೇಯಿ ನಗರ ವಸತಿ ಯೋಜನೆ ಮತ್ತು ಡಿ. ದೇವರಾಜ ಅರಸು ವಿಶೇಷ ವಸತಿ ಯೋಜನೆ ವಸತಿ ಯೋಜನೆಗಳಲ್ಲಿ ಶೇಕಡ 10ರಷ್ಟನ್ನು ಅಲ್ಪಸಂಖ್ಯಾತರಿಗಾಗಿ ನಿಗದಿಪಡಿಸಲಾಗಿದೆ.

ಸದರಿ ಯೋಜನೆಗಳಿಗಾಗಿ ತಗಲುವ ವೆಚ್ಚವನ್ನು 2017-18ನೇ ಸಾಲಿನ ಆಯವ್ಯಯದಲ್ಲಿ ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗಳಡಿ ಒದಗಿಸಿರುವ ಅನುದಾನದ ಮೊತ್ತದಿಂದ ಭರಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ
(ಶಿವಕುಮಾರಸ್ವಾಮಿ.ಸಿ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ-2,
ವಸತಿ ಇಲಾಖೆ.

**ಇವರಿಗೆ:**

1) ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ) (ಇ & ಆರ್ ಎಸ್‌ಎ), ಕರ್ನಾಟಕ ಬೆಂಗಳೂರು.

2) ಮಹಾಲೇಖಪಾಲರು(ಎ&ಇ) ಕರ್ನಾಟಕ ಬೆಂಗಳೂರು.
3) ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು.
4) ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು.
5) ಎಲ್ಲಾ ಜಿಲ್ಲಾಧಿಕಾರಿಗಳು.
6) ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
7) ಎಲ್ಲಾ ಕಾರ್ಯನಿರ್ವಹಣಾಧಿಕಾರಿಗಳು.

(5–7: ವ್ಯ.ನಿ.,ರಾ.ಗಾಂ.ಗ್ರಾ.ವ.ನಿ.ನಿ. ಇವರ ಮುಖಾಂತರ ಹೊರಡಿಸುವುದು.)

8) ಶಾಖಾ ರಕ್ಷಾ ಕಡತ/ಹೆಚ್ಚಿನ ಪ್ರತಿಗಳು.

ಪ್ರತಿ ಮಾಹಿತಿಗಾಗಿ:

1. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
2. ಮಾನ್ಯ ವಸತಿ ಸಚಿವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ(ಸಚಿವರ ಸಂಪುಟ ಪ್ರಕರಣ ಸಂಖ್ಯೆ: ಸಿ.351/2017ರ ಮಾಹಿತಿಗಾಗಿ), ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಆರ್ಥಿಕ ಇಲಾಖೆ. ವಿಧಾನ ಸೌಧ.
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಸತಿ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
7. ಜಂಟಿ ನಿರ್ದೇಶಕರು, (ಯೋಜನೆ), ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ.
8. ಸರ್ಕಾರದ ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರು.

# <u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ : ಸರ್ಕಾರದ ವಸತಿ ಯೋಜನೆಗಳನ್ನು ಯಶಸ್ವಿಯಾಗಿ, ನಿಗದಿತ ಅವಧಿಯಲ್ಲಿ ಮತ್ತು ತ್ವರಿತವಾಗಿ ಅನುಷ್ಠಾನಗೊಳಿಸಲು ಬಸವ ಗ್ರಾಮೀಣ ವಸತಿ ಯೋಜನೆ, ವಾಜಪೇಯಿ ನಗರ ವಸತಿ ಯೋಜನೆ ಮತ್ತು ಡಿ.ದೇವರಾಜ ಅರಸು ವಿಶೇಷ ವಸತಿ ಯೋಜನೆಗಳ ಮಾರ್ಗಸೂಚಿಗಳನ್ನು ಸರಳೀಕರಣಗೊಳಿಸುವ ಕುರಿತು

---0---

<u>ಓದಲಾಗಿದೆ:</u>

1. ಸರ್ಕಾರದ ಆದೇಶ ಸಂಖ್ಯೆ: ವಇ 39 ಹೆಚ್‌ಎಹೆಚ್ 2013, ದಿನಾಂಕ:20.05.2013.
2. ಸರ್ಕಾರದ ಆದೇಶ ಸಂಖ್ಯೆ: ವಇ 114 ಹೆಚ್‌ಎಹೆಚ್ 2015, ದಿನಾಂಕ:19.11.2015.
3. ಸರ್ಕಾರದ ಆದೇಶ ಸಂಖ್ಯೆ: ವಇ 33 ಹೆಚ್‌ಎಹೆಚ್ 2013, ದಿನಾಂಕ:29.09.2014.
4. ಸರ್ಕಾರದ ಆದೇಶ ಸಂಖ್ಯೆ: ವಇ 36 ಹೆಚ್‌ಎಹೆಚ್ 2016, ದಿನಾಂಕ:29.04.2016.
5. ಸರ್ಕಾರದ ಆದೇಶ ಸಂಖ್ಯೆ: ವಇ 67 ಹೆಚ್‌ಎಹೆಚ್ 2015, ದಿನಾಂಕ:16.11.2015.

<u>ಪ್ರಸ್ತಾವನೆ:</u>

ಸರ್ಕಾರವು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ ಮೂಲಕ ಈ ಕೆಳಕಂಡ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ:-

1. ಬಸವ ಗ್ರಾಮೀಣ ವಸತಿ ಯೋಜನೆ
2. ವಾಜಪೇಯಿ ನಗರ ವಸತಿ ಯೋಜನೆ
3. ದೇವರಾಜ್ ಅರಸು ವಿಶೇಷ ವಸತಿ ಯೋಜನೆ

ಮೇಲೆ ಓದಲಾದ ಕ್ರಮ ಸಂಖ್ಯೆ (1) ಮತ್ತು (2)ರ ಸರ್ಕಾರಿ ಆದೇಶಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ಅನುಷ್ಠಾನಗೊಳಿಸುತ್ತಿರುವ ಬಸವ ವಸತಿ ಮತ್ತು ನಗರ ಪ್ರದೇಶದಲ್ಲಿ ಅನುಷ್ಠಾನಗೊಳಿಸುತ್ತಿರುವ ವಾಜಪೇಯಿ ನಗರ ವಸತಿ ಯೋಜನೆಗಳಡಿ, ಸಾಮಾನ್ಯ ವರ್ಗದವರಿಗೆ ರೂ.1.20ಲಕ್ಷ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ರೂ.1.50ಲಕ್ಷ ಸಹಾಯಧನವನ್ನು ನಿಗದಿಪಡಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ಮತ್ತು (4)ರಲ್ಲಿನ ಸರ್ಕಾರಿ ಆದೇಶಗಳಲ್ಲಿ ವಿಶೇಷ ವರ್ಗದವರಿಗಾಗಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ದೇವರಾಜ ಅರಸು ವಸತಿ ಯೋಜನೆಯನ್ನು ಜಾರಿಗೆ ತಂದಿದ್ದು, ಸಾಮಾನ್ಯ ವರ್ಗದವರಿಗೆ ರೂ.1.20ಲಕ್ಷ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ರೂ.1.50ಲಕ್ಷ ಸಹಾಯಧನವನ್ನು ನಿಗದಿಪಡಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(5)ರಲ್ಲಿರುವ ಸರ್ಕಾರಿ ಆದೇಶದಲ್ಲಿ ವಸತಿ ಇಲಾಖೆಯ ಮುಖಾಂತರ ವಿವಿಧ ವಸತಿ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ಆಗುತ್ತಿದ್ದ ವಿಳಂಭ ಮತ್ತು ನ್ಯೂನ್ಯತೆಗಳನ್ನು ಸರಿಪಡಿಸಲು ಮಾರ್ಗಸೂಚಿಗಳನ್ನು ಹೊರಡಿಸಲಾಗಿತ್ತು. ಅದೇ ಸಂಖ್ಯೆಯ ಮತ್ತು ದಿನಾಂಕದ ಮತ್ತೊಂದು ಆದೇಶದಲ್ಲಿ ಜಾಗೃತ ಸಮಿತಿಯನ್ನು ರಚಿಸಿ, ಜಾಗೃತ ಸಮಿತಿಯ ಜವಾಬ್ದಾರಿಯನ್ನು ನಿಗದಿಪಡಿಸಲಾಗಿರುತ್ತದೆ.

2...

ಆದರೆ, ಸದರಿ ಮಾರ್ಗಸೂಚಿಗಳಲ್ಲಿ ತಿಳಿಸಿರುವ ಹಲವಾರು ಆಯ್ಕೆ ವಿಧಾನಗಳಿಂದಾಗಿ ಫಲಾನುಭವಿಗಳ ಆಯ್ಕೆಯು ವಿಳಂಬವಾಗುತ್ತಿದೆ, ಅವುಗಳೆಂದರೆ, ಗುರಿಯ ಹಂಚಿಕೆ, ಗ್ರಾಮಸಭೆ ನಡೆಸುವುದು, ಕೆಲವು ಪ್ರವರ್ಗಗಳಲ್ಲಿ ಫಲಾನುಭವಿಗಳು ದೊರೆಯದಿರುವುದು ಮತ್ತು ಆಶ್ರಯ ಹಾಗೂ ಜಾಗೃತ ಸಮಿತಿಗಳ ಅನುಮೋದನೆ ಪಡೆಯುವುದು ಸೇರಿರುತ್ತದೆ. ಫಲಾನುಭವಿಗಳ ಆಯ್ಕೆಯನ್ನು ಅಂತಿಮಗೊಳಿಸಲು ಒಂದೂವರೆ ವರ್ಷಕ್ಕಿಂತ ಹೆಚ್ಚಿನ ಅವಧಿಯನ್ನು ತೆಗೆದುಕೊಳ್ಳಲಾಗುತ್ತಿದೆ. ಇದರಿಂದಾಗಿ ಮನೆಗಳ ನಿರ್ಮಾಣವನ್ನು ಪೂರೈಸಲು ವಿಳಂಬವಾಗುತ್ತಿದೆ. ಆದುದರಿಂದ, ಫಲಾನುಭವಿಗಳ ಆಯ್ಕೆಗೇ ಅತಿಯಾದ ಒತ್ತು ನೀಡುವಿಕೆ ಇರಬಾರದೆಂಬ ಕಾರಣದಿಂದ ಆಯ್ಕೆ ವಿಧಾನಗಳ ಸರಳೀಕರಣದ ಅವಶ್ಯಕತೆ ಇದೆ. ಈ ಪ್ರಸ್ತಾವನೆಯು, ಫಲಾನುಭವಿಗಳ ಆಯ್ಕೆಯ ಪ್ರಕ್ರಿಯೆಯಲ್ಲಿನ ಕೊರತೆಯನ್ನು ನೀಗಿಸುವ ಗುರಿಯನ್ನು ಹೊಂದಿದೆ. ಅದಕ್ಕಾಗಿ, ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲು ಇರುವ ವಿಧಾನಗಳನ್ನು ಸರಳೀಕರಣಗೊಳಿಸಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಪರಿಶೀಲಿಸಿ, ಸರ್ಕಾರದ ವಸತಿ ಯೋಜನೆಗಳನ್ನು ಯಶಸ್ವಿಯಾಗಿ, ನಿಗದಿತ ಅವಧಿಯಲ್ಲಿ ಮತ್ತು ತ್ವರಿತವಾಗಿ ಅನುಷ್ಠಾನಗೊಳಿಸಲು ಬಸವ ಗ್ರಾಮೀಣ ವಸತಿ ಯೋಜನೆ, ವಾಜಪೇಯಿ ನಗರ ವಸತಿ ಯೋಜನೆ ಮತ್ತು ಡಿ.ದೇವರಾಜ ಅರಸು ವಿಶೇಷ ವಸತಿ ಯೋಜನೆಗಳಡಿ ಗುರಿ ನಿಗಧಿ, ಫಲಾನುಭವಿಗಳ ಆಯ್ಕೆ ಮತ್ತು ಫಲಾನುಭವಿಗಳ ಆಯ್ಕೆಯಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಸರಳೀಕರಣಗೊಳಿಸುವ ಕುರಿತು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**<u>ಸರ್ಕಾರಿ ಆದೇಶ ಸಂಖ್ಯೆ: ವಇ 35 ಹೆಚ್‌ಎಹೆಚ್ 2017(2), ಬೆಂಗಳೂರು, ದಿನಾಂಕ:05.06.2017.</u>**

ಮೇಲಿನ ಪ್ರಸ್ತಾವನೆಯ ಹಿನ್ನಲೆಯಲ್ಲಿ, ರಾಜ್ಯದ ಎಲ್ಲ ವಸತಿ ಯೋಜನೆಗಳ ಗುರಿಯನ್ನು ಮೂರು ಭಾಗಗಳಾಗಿ ವಿಭಾಗಿಸಿ, ಯೋಜನಾವಾರು ಗುರಿ ಹಂಚಿಕೆ ಮಾಡಿ ಆದೇಶಿಸಿದೆ (ಡಾ||ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆಯು ಬೇಡಿಕೆಯಾಧಾರಿತವಾಗಿರುವುದರಿಂದ ಅದನ್ನು ಹೊರತುಪಡಿಸಿ);

ಅ) ವಿಧಾನಸಭಾ ಕ್ಷೇತ್ರವಾರು ಜನಸಂಖ್ಯೆಯಾಧಾರಿತ.
ಆ) ಬೇಡಿಕೆ ಅಥವಾ ಅರ್ಹತೆಯ ಅಗತ್ಯತೆಯ ಗುರಿಯಾಧಾರಿತ.
ಇ) ಸ್ಥಳೀಯ ಸಂಸ್ಥೆಗಳಿಗೆ ಜನಸಂಖ್ಯೆಗೆ ಅನುಗುಣವಾಗಿ.

1. ರಾಜ್ಯದ ವಸತಿ ಯೋಜನೆಗಳ ಗುರಿಯನ್ನು ಈ ಕೆಳಗೆ ತಿಳಿಸಿರುವಂತೆ ಹಂಚಿಕೆ ಮಾಡುವುದು.

<u>(1) ಬಸವ ಗ್ರಾಮೀಣ ವಸತಿ ಯೋಜನೆ:–</u>

ಅ) ಶೇ.60 ರಷ್ಟನ್ನು ವಿಧಾನಸಭಾ ಕ್ಷೇತ್ರವಾರು ಸಾಮಾನ್ಯ ವರ್ಗದವರಿಗಾಗಿ ಮಾತ್ರ ಗುರಿ ಹಂಚಿಕೆ. ಅದರಲ್ಲಿ –

(i) ಶೇ.60ರಷ್ಟನ್ನು ಗ್ರಾಮ ಪಂಚಾಯಿತಿವಾರು ಹಂಚಿಕೆಯನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ ಮೂಲಕ ಗುರಿ ಹಂಚಿಕೆ ಮಾಡುವುದು.

(ii) ಶೇ.40ರಷ್ಟನ್ನು ಗ್ರಾಮ ಪಂಚಾಯಿತಿವಾರು ಅರ್ಹತೆಯ ಅಗತ್ಯತೆಯ ಗುರಿಯನ್ನು ಜಾಗೃತಿ ಸಮಿತಿಯಿಂದ ಹಂಚಿಕೆ ಮಾಡುವುದು.

ಆ) ಶೇ.30ರಷ್ಟನ್ನು ಗ್ರಾಮ ಪಂಚಾಯಿತಿವಾರು ಅರ್ಹತೆಯ ಅಗತ್ಯತೆಯ ಗುರಿಯನ್ನು ಸರ್ಕಾರದಿಂದ ಹಂಚಿಕೆ ಮಾಡುವುದು.

ಇ) ಶೇ.10ರಷ್ಟನ್ನು ವಿಶೇಷ ಅಗತ್ಯತೆಗೆ ಅಂದರೆ, ನೆರೆಪೀಡಿತ ಪ್ರದೇಶ, ಯೋಜನಾ ನಿರ್ವಸತಿಗಾಗಿ, ಪ್ರಕೃತಿ ವಿಕೋಪ ಇತ್ಯಾದಿಗಳಿಗಾಗಿ ಗ್ರಾಮ ಪಂಚಾಯಿತಿವಾರು ಸರ್ಕಾರದಿಂದ ಹಂಚಿಕೆ ಮಾಡುವುದು.

(2) ವಾಜಪೇಯಿ ನಗರ ವಸತಿ ಯೋಜನೆ:

ಅ) ಶೇ.25ರಷ್ಟನ್ನು ಅರ್ಹತೆಯ ಅಗತ್ಯತೆಗಾಗಿ ಸರ್ಕಾರದ ಮೂಲಕ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಮಾಡಲು ವಾರ್ಷಿಕ ಗುರಿಯನ್ನು ಮೀಸಲಿರಿಸುವುದು;

ಆ) ತದನಂತರ, ಪ್ರತಿ ವರ್ಷವು, ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಯೋಜನೆಗಳೊಂದಿಗೆ ಸಮನ್ವಯಗೊಳಿಸಿಕೊಂಡು ನಿರ್ದಿಷ್ಟ ಗುರಿಯನ್ನು ನೀಡುವ ಅಥವಾ ತಳ್ಳಿಹಾಕುವ ನಿರ್ಧಾರವನ್ನು ಸರ್ಕಾರ ಹೊಂದಿರುತ್ತದೆ;

ಇ) ಶೇ.25ರಷ್ಟು ಸ್ಥಳೀಯ ಸಂಸ್ಥೆಗಳಿಗೆ ಲಂಬೀಯ ಕಟ್ಟಡ ನಿರ್ಮಾಣಕ್ಕಾಗಿ;

ಈ) ಬಾಕಿ ಉಳಿದಿದ್ದನ್ನು ಜನಸಂಖ್ಯೆಗನುಗುಣವಾಗಿ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಮಾಡುವುದು.

(ಪ್ರತಿ ಸ್ಥಳೀಯ ಸಂಸ್ಥೆಗೆ ಕನಿಷ್ಠ 20 ಘಟಕಗಳು)

(3) ಡಿ. ದೇವರಾಜ ಅರಸು ವಿಶೇಷ ವಸತಿ ಯೋಜನೆ:

ಅ) ಶೇ.70ರಷ್ಟನ್ನು ಜನಸಂಖ್ಯೆಗನುಗುಣವಾಗಿ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಗೆ ಹಂಚಿಕೆ ಮಾಡುವುದು.

ಆ) ಶೇ.30ರಷ್ಟನ್ನು ಅರ್ಹತೆಯ ಅಗತ್ಯತೆಗಾಗಿ ಗ್ರಾಮ ಪಂಚಾಯಿತಿಗಳಿಗೆ/ ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರದ ಮೂಲಕ ಹಂಚಿಕೆ ಮಾಡುವುದು.

ಮೇಲೆ ತಿಳಿಸಿರುವ ಮೂರು ಯೋಜನೆಗಳಲ್ಲಿ ಶೇಕಡ 10ರಷ್ಟನ್ನು ಅಲ್ಪಸಂಖ್ಯಾತರಿಗಾಗಿ ಮೀಸಲಿರಿಸುವುದು.

ವಸತಿ ಯೋಜನೆಗಳನ್ನು ಕೈಗೊಳ್ಳುವ ಪ್ರದೇಶಗಳಲ್ಲಿ ಎಲ್ಲೆಲ್ಲಿ ಸಾಧ್ಯವೋ ಅಂತಹ ಕಡೆಗಳಲ್ಲೆಲ್ಲ ಬಹುಮಹಡಿ ಕಟ್ಟಡಗಳನ್ನು ನಿರ್ಮಿಸುವುದು.

ಸರ್ಕಾರದ ವಸತಿ ಯೋಜನೆಗಳಾದ ಬಸವ ಗ್ರಾಮೀಣ ವಸತಿ ಯೋಜನೆ, ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ(ಗ್ರಾಮೀಣ ಮತ್ತು ನಗರ) ಮತ್ತು ವಾಜಪೇಯಿ ನಗರ ವಸತಿ ಯೋಜನೆಗಳಲ್ಲಿ ಫಲಾನುಭವಿಗಳ ಆಯ್ಕೆಯ ವಿಧಾನಗಳು ಮತ್ತು ಬಳಕೆಯಾಗದ ಗುರಿಯನ್ನು ಮರು ಹಂಚಿಕೆ ಮಾಡಲು ಅನುಸರಿಬೇಕಾದ ವಿಧಾನಗಳನ್ನು ಅನುಬಂಧದಲ್ಲಿ ವಿವರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಶಿವಕುಮಾರಸ್ವಾಮಿ.ಸಿ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ-2,
ವಸತಿ ಇಲಾಖೆ.

ಇವರಿಗೆ:

1) ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ) (ಇ & ಆರ್ ಎಸ್ಎ), ಕರ್ನಾಟಕ ಬೆಂಗಳೂರು.
2) ಮಹಾಲೇಖಪಾಲರು(ಎ&ಇ) ಕರ್ನಾಟಕ ಬೆಂಗಳೂರು.
3) ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು.
4) ಆಯುಕ್ತರು, ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು.
5) ಎಲ್ಲಾ ಜಿಲ್ಲಾಧಿಕಾರಿಗಳು.
6) ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
7) ಎಲ್ಲಾ ಕಾರ್ಯನಿರ್ವಹಣಾಧಿಕಾರಿಗಳು.

(5–7: ವ್ಯ.ನಿ.,ರಾ.ಗಾಂ.ಗ್ರಾ.ವ.ನಿ.ನಿ. ಇವರ ಮುಖಾಂತರ ಹೊರಡಿಸುವುದು.)

8) ಶಾಖಾ ರಕ್ಷಾ ಕಡತ/ಹೆಚ್ಚಿನ ಪ್ರತಿಗಳು.

<u>ಪ್ರತಿ ಮಾಹಿತಿಗಾಗಿ:</u>

1. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
2. ಮಾನ್ಯ ವಸತಿ ಸಚಿವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ(ಸಚಿವರ ಸಂಪುಟ ಪ್ರಕರಣ ಸಂಖ್ಯೆ:ಸಿ.351/2017ರ ಮಾಹಿತಿಗಾಗಿ), ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ.
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಸತಿ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
7. ಜಂಟಿ ನಿರ್ದೇಶಕರು(ಯೋಜನೆ), ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ.
8. ಸರ್ಕಾರದ ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರು.

## ಅನುಬಂಧ

(ಸರ್ಕಾರಿ ಆದೇಶ ಸಂಖ್ಯೆ:35 ಹೆಚ್‌ಎಹೆಚ್ 2017(2) ದಿನಾಂಕ:05.06.017ಕ್ಕೆ)

## ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಫಲಾನುಭವಿಗಳ ಆಯ್ಕೆಯ ವಿಧಾನಗಳು ಮತ್ತು ಬಳಕೆಯಾಗದ ಗುರಿಯನ್ನು ಮರು ಹಂಚಿಕೆ ಮಾಡಲು ಅನುಸರಿಬೇಕಾದ ವಿಧಾನಗಳು

### 1.Urban Beneficiary Selection:

a. The ULB wise targets shall be allocated from the Government as mentioned in the order.
b. The Ashraya Committee shall select eligible "houseless" beneficiaries within 90 days from the date of allocation of ULB wise beneficiary targets from the State level. Provided that if for any reason the Ashraya Committee fails to select the eligible beneficiaries within the said 90 days then the concerned Deputy Commissioner is authorized to select the eligible houseless beneficiaries from among the Urban Demand Survey list which has been prepared by the Urban Local Bodies in 2016-17.
c. The Ashraya Committee or the Deputy Commissioner, as the case may be, shall include name of every eligible houseless family who apply or 200% of the housing target for the Urban Local Body – whichever is higher, and selection list shall be the prioritized list of the said eligible houseless families. The names beyond the number of housing target shall be utilized in the prescribed priority serial order if for any reason another beneficiary has to be selected for the same ULB in the same year.

### 2.Rural beneficiary Selection:

a. The individual beneficiary selection for the rural housing schemes shall be by the Grama Sabha as per the Karnataka Panchayat Raj Act. The Gram Sabha must be completed within 30 days from the date of communication of target by RGRHCL.
b. In case any Gram Panchayat fails to complete the Grama Sabha and its data entry into the RGRHCL software within 30 days from the date of decision of Gram Panchayat wise beneficiary targets as per point (a) above; the Chief Executive Officer of Zilla Panchayat shall cause the Gram Sabha to be conducted within 15 days of the expiry of upper limit of 30 days through and in presence of the Executive Officer of Taluk Panchayat Samiti or any Grama Sabha Nodal Officer which he may appoint for the purpose. That is a Grama Sabha must be ensured to be conducted within 45 days from the date of decision of the Gram Panchayat wise beneficiary targets as per point (a) above.
c. The government will take all steps necessary to streamline conduct of Gram Sabhas in a time-bound and transparent manner through the concerned Panchayat Raj Institutions and the Chief Executive Officer of Zilla Panchayats, including through use of Information Technology and Mobile Technology.
d. The Grama Sabha shall prioritize and make a selection-cum-waiting list by including name of every eligible houseless family who applies or 200% of the housing target for the Gram Panchayat – whichever is higher, and selection list shall be the prioritized list of the said eligible houseless families. The names beyond the housing target of the GP shall be utilized strictly in the prioritized serial order of the Grama Sabha by the Executive Officer, Taluk Panchayats/ Chief Executive Officer, Zilla Panchayat/Vigilance Committee, if for any reason another beneficiary has to be selected for the same Gram Panchayat in the same year for the given scheme.

2. **Reallocation of the Beneficiary Targets:**

a. If at any point of time it is assessed that the allotted housing targets within a district are not being utilized by an Urban Local Body or a Gram Panchayat by way of selection of the housing beneficiaries and more than 120 days have elapsed from the date of communication of the targets, then the Deputy Commissioner for the urban housing schemes and the Chief Executive Officer for the rural housing schemes shall have the authority to shift the housing targets among the Urban Local Bodies and the Gram Panchayats (within or beyond the taluks), respectively.

b. In case a district fails to issue work orders as per the allotted housing targets within 120 days of communication of targets, then the Deputy Commissioner for urban housing schemes and the Chief Executive Officer for the rural housing schemes must submit a detailed report thereon and support with reasons the housing targets that his/her district would be unable to utilize.

c. RGRHCL may, after taking into consideration the reports of the Deputy Commissioner or the Chief Executive Officer – as the case may be, within 145 days of communication of targets allocate 75% of such surrendered targets which districts have reported as being unable to utilize, to another district(s) which has issued at least 70% work orders of its allotted housing target of the scheme for the year, on the basis of the population taking due account of targets already made available and the balance eligible houseless families. This allocation of the surrendered targets to the districts which have utilized more than 70% of their own housing targets shall, in turn, be allocated on the basis of population in proportion to the balance eligible houseless families to only such Gram Panchayats & Urban Local Bodies which have themselves issued at least 85% work orders against the housing target of the year. The rest 25% of such surrendered housing targets shall be allocated by the State Government as per assessed need/demand.

d. Provided after lapse of 210 days and 270 days from the date of communication of the targets every year the RGRHCL shall make a similar report with respect to each district not withstanding whether the concerned Deputy Commissioner or the Chief Executive Officer submits such a report or not, assessing which district would fail to fully utilize the allotted housing targets, and allocate 75% of the un-utilizable targets as are unlikely to be utilized to another district on same principles as stated in points (a) to (c) above. The rest of the 25% of such housing targets shall be allotted by the State Government as per assessed need/demand.

e. Provided further that in case of houses that remain un-started beyond 90 days from the date of issue of work orders then they shall be blocked and cancelled after a duly served show-cause notice to the concerned beneficiary. Thereafter, such a cancelled house could be utilized within the district within 90 days utilizing the Grama Sabha or the Ashraya Committee selection waiting list by the CEO ZP or the DC, respectively. Provided that thereafter action be taken as per points (b) to (d) above to cancel and shift such un-started houses to another district.

(ಶಿವಕುಮಾರಸ್ವಾಮಿ ಸಿ.ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ-2
ವಸತಿ ಇಲಾಖೆ.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಸರ್ಕಾರದ ವಸತಿ ಯೋಜನೆಯಡಿ ಅನುಷ್ಠಾನಗೊಳಿಸುತ್ತಿರುವ ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಯಡಿ ನಿವೇಶನ ಹೊಂದಿರುವ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬಗಳಿಗೆ "ಬೇಡಿಕೆ ಮೇಲೆ ಮನೆ **(House - on- demand)**" ನೀಡುವ ಬಗ್ಗೆ.

---0---

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ವಇ 67 ಹೆಚ್ಎಹೆಚ್ 2015, ದಿನಾಂಕ:16.11.2015
2. ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಇವರ ಕಚೇರಿ ಇವರ ಪತ್ರ ಸಂಖ್ಯೆ:RGRHCL 01 ANRO 03, 2017-18, ದಿನಾಂಕ:05.04.2017 ಮತ್ತು 17.04.2017

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಆದೇಶದಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಸತಿ ರಹಿತರಿಗೆ ವಸತಿಯನ್ನು ಕಲ್ಪಿಸಲು ನೂತನವಾಗಿ ಡಾ॥ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಯನ್ನು 2015-16ನೇ ಸಾಲಿನಲ್ಲಿ ಜಾರಿಗೆ ತರಲಾಗಿದೆ. ಈ ವಸತಿ ಯೋಜನೆಯಡಿ ಗ್ರಾಮೀಣ ಪ್ರದೇಶಕ್ಕೆ ಪ್ರತಿ ಮನೆಗೆ ರೂ.1.50ಲಕ್ಷ ಮತ್ತು ನಗರ ಪ್ರದೇಶಗಳಿಗೆ ಪ್ರತಿ ಮನೆಗೆ ರೂ.1.8ಲಕ್ಷಗಳ ಸಹಾಯಧನವನ್ನು ನಿಗದಿಪಡಿಸಲಾಗಿತ್ತು. ಸದರಿ ಆದೇಶದಲ್ಲಿ ವಸತಿ ಇಲಾಖೆಯ ಮುಖಾಂತರ ವಿವಿಧ ವಸತಿ ಯೋಜನೆಯಡಿ ಅನುಷ್ಠಾನಗೊಳಿಸುತ್ತಿರುವ ವಸತಿ ಯೋಜನೆಗಳ ಮಾರ್ಗಸೂಚಿಗಳನ್ನು ಸಹ ರೂಪಿಸಲಾಗಿದೆ. ಅದೇ ಸಂಖ್ಯೆ ಮತ್ತು ದಿನಾಂಕದ ಮತ್ತೊಂದು ಆದೇಶದಲ್ಲಿ ಜಾಗೃತ ಸಮಿತಿಯನ್ನು ರಚಿಸಿ, ಜಾಗೃತ ಸಮಿತಿಯ ಜವಾಬ್ದಾರಿಯನ್ನು ನಿಗದಿಪಡಿಸಲಾಗಿರುತ್ತದೆ.

2017-18ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಡಾ॥ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಯಡಿ ಮನೆಗಾಗಿ ಅರ್ಜಿ ಸಲ್ಲಿಸುವ ನಿವೇಶನ ಹೊಂದಿರುವಂತಹ ಎಲ್ಲಾ ವಸತಿ ರಹಿತ ಅರ್ಹ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ವಸತಿ ಸೌಲಭ್ಯ ಒದಗಿಸಲಾಗುವುದೆಂದು ಘೋಷಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು ಇವರು ಪ್ರಸ್ತಾವನೆ ಸಲ್ಲಿಸುತ್ತಾ, ನಿವೇಶನ ಹೊಂದಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಸತಿ ರಹಿತ ಕುಟುಂಬಗಳಿಗೆ "ಬೇಡಿಕೆಯ ಮೇಲೆ ಮನೆ" ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಮಾರ್ಗಸೂಚಿಗಳನ್ನು ತಯಾರಿಸಿ ಅದರಂತೆ ಸರ್ಕಾರಿ ಆದೇಶವನ್ನು ಹೊರಡಿಸಲು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಪರಿಶೀಲಿಸಿ, ಡಾ॥ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಯಡಿ ಫಲಾನುಭವಿಗಳಿಗೆ ಮನೆಗಳ ನಿರ್ಮಾಣಕ್ಕಾಗಿ ಸಹಾಯಧನವನ್ನು ನೀಡುವ ಕುರಿತು "ಬೇಡಿಕೆಯ ಮೇಲೆ ಮನೆ" ಎಂಬ ಪರಿಕಲ್ಪನೆಯ ಮೂಲಕ ಸದರಿ ವಸತಿ ಯೋಜನೆಯನ್ನು ಅನುಷ್ಠಾನಗೊಳಿಸಲು ಈ ಕೆಳಗಿನಂತೆ ಆದೇಶಿಸಿದೆ.

## ಸರ್ಕಾರಿ ಆದೇಶ ಸಂಖ್ಯೆ: ವಇ 35 ಹೆಚ್ಎಹೆಚ್ 2017(1), ಬೆಂಗಳೂರು, ದಿನಾಂಕ:05.06.2017.

ಮೇಲಿನ ಪ್ರಸ್ತಾವನೆಯ ಹಿನ್ನಲೆಯಲ್ಲಿ, ಸರ್ಕಾರದ ವಸತಿ ಯೋಜನೆಯಾದ ಡಾ॥ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಯಡಿ, ವಸತಿ ರಹಿತ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ(ನಿವೇಶನ ಹೊಂದಿರುವವರಿಗೆ) ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ "ಬೇಡಿಕೆಯ ಮೇಲೆ ಮನೆ" ನೀಡುವ ಯೋಜನೆಯನ್ನು ಜಾರಿಗೆ ತಂದು ಆದೇಶಿಸಲಾಗಿದೆ.

ಈ ಯೋಜನೆಗಾಗಿ ತಗಲುವ ವೆಚ್ಚವನ್ನು ಪ್ರತಿ ವರ್ಷದ ಆಯವ್ಯಯದಲ್ಲಿ ವಸತಿ ಯೋಜನೆಗಳಿಗಾಗಿ ಒದಗಿಸುವ ಅನುದಾನದಲ್ಲಿ ಎಸ್‌ಸಿಪಿ/ಟಿಎಸ್‌ಪಿ ಘಟಕದಡಿ ಒದಗಿಸುವ ಮೊತ್ತದಿಂದ ಭರಿಸುವುದು. 2017-18ನೇ ಸಾಲಿಗೆ ಸಾಂಕೇತಿಕವಾಗಿ ರೂ.1.56ಲಕ್ಷಗಳ ವಾರ್ಷಿಕ ಗುರಿಯನ್ನು ನೀಡಲಾಗಿದೆ. ಸದರಿ ಯೋಜನೆಗಾಗಿ ಫಲಾನುಭವಿಗಳ ಆಯ್ಕೆಗೆ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಅನುಬಂಧದಲ್ಲಿ ವಿವರಿಸಲಾಗಿದೆ.

ಈ ಯೋಜನೆಯು ಬೇಡಿಕೆಯಾಧಾರಿತವಾಗಿರುವುದರಿಂದ, ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಪಂಚಾಯಿತಿ ಮತ್ತು ನಗರ ಪ್ರದೇಶಗಳಲ್ಲಿ ಸ್ಥಳೀಯ ಸಂಸ್ಥೆಯ ಮುಖ್ಯಾಧಿಕಾರಿ/ ಆಯುಕ್ತರು ಎಲ್ಲಾ ಅರ್ಹ ಫಲಾನುಭವಿಗಳಿಗೆ ಕಾರ್ಯಾದೇಶವನ್ನು ನೀಡತಕ್ಕದ್ದು. ಈ ಯೋಜನೆಗಾಗಿ ಗುರಿಯನ್ನು ನಿಗದಿಪಡಿಸುವ ಅಗತ್ಯವಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ
(ಶಿವಕುಮಾರಸ್ವಾಮಿ.ಸಿ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ-2,
ವಸತಿ ಇಲಾಖೆ.

ಇವರಿಗೆ:

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್.ಎಸ್.ಎ) (ಇ&ಆರ್.ಎಸ್.ಎ), ಕರ್ನಾಟಕ ಬೆಂಗಳೂರು.
2) ಮಹಾಲೇಖಪಾಲರು(ಎ&ಇ) ಕರ್ನಾಟಕ ಬೆಂಗಳೂರು.
3) ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು.
4) ಆಯುಕ್ತರು, ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು.
5) ಎಲ್ಲಾ ಜಿಲ್ಲಾಧಿಕಾರಿಗಳು.
6) ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
7) ಎಲ್ಲಾ ಕಾರ್ಯನಿರ್ವಹಣಾಧಿಕಾರಿಗಳು.

(5-7: ವ್ಯ.ನಿ.,ರಾ.ಗಾಂ.ಗ್ರಾ.ವ.ನಿ.ನಿ. ಇವರ ಮುಖಾಂತರ ಹೊರಡಿಸುವುದು.)

8) ಶಾಖಾ ರಕ್ಷಾ ಕಡತ/ಹೆಚ್ಚಿನ ಪ್ರತಿಗಳು.

ಪ್ರತಿ ಮಾಹಿತಿಗಾಗಿ:

1) ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
2) ಮಾನ್ಯ ವಸತಿ ಸಚಿವರ ಆಪ್ತ ಕಾರ್ಯದರ್ಶಿ.
3) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ(ಸಚಿವರ ಸಂಪುಟ ಪ್ರಕರಣ ಸಂಖ್ಯೆ:ಸಿ.351/2017ರ ಮಾಹಿತಿಗಾಗಿ), ವಿಧಾನಸೌಧ, ಬೆಂಗಳೂರು.
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5) ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ.
6) ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಸತಿ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
7) ಜಂಟಿ ನಿರ್ದೇಶಕರು(ಯೋಜನೆ), ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ.
8) ಸರ್ಕಾರದ ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರು.

<u>ಅನುಬಂಧ</u>

<u>(ಸರ್ಕಾರಿ ಆದೇಶ ಸಂಖ್ಯೆ: ವಇ 35 ಹೆಚ್‌ಎಹೆಚ್(1) 2017, ದಿನಾಂಕ: 05.06.2017.)</u>

## <u>ಡಾ॥ ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಯಡಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ "ಬೇಡಿಕೆಯ ಮೇಲೆ ಮನೆ" ನೀಡುವ ಯೋಜನೆಯ ಮಾರ್ಗಸೂಚಿಗಳು</u>

1. Any family belonging to the Scheduled Castes or the Scheduled Tribes can apply for a house and same shall be considered as per eligibility.

2. Bulk applications shall not be accepted.

3. Applicant can apply (1) ONLINE or (2) Indira Mane Mobile Application, or by (3) physically approaching a Gram Panchayat or Urban Local Body for rural or urban areas, respectively.

4. Applicant must submit the following mandatory information/document:-
   - I. Caste Certificate Number (based on which RGRHCL will fetch original caste certificate from Karnataka Jana Snehi Kendra through web service).
   - II. Income Certificate Number from Karnataka Jana Snehi Kendra through web service.
   - III. Ration Card Number (RGRHCL will fetch ration card details from software of Food Department).
   - IV. Property or Survey Number belonging to Applicant (RGRHCL software will fetch details from e-Swathu or Bhoomi-as the case may be)
   - V. Aadhaar Number with photocopy/photo click/scan of Aadhaar Card.

5. The above submitted information shall be preliminarily verified real time (including using Matching algorithm) and then the application shall be accepted. In case of missing information or mismatch, proper endorsement shall be issued.

6. For all accepted application PDO/GP or the Urban Local Body, as the case may be, shall ensure clicking of GPS photograph of i) Existing place of stay of applicant ii) Vacant/Proposed site for House construction.

7. Further, an Applicant herself can click GPS photograph of the i) existing place of her/his stay and ii) Vacant site, using "Indira Mane Mobile App". This an Applicant can do along with her application submission or at any later time.

8. With all relevant information and GPS photograph of an Application the PDO in case of rural, applicants and Chief Officer/Commissioner in case of urban applicants shall verify the eligibility of the applicant (eligibility as per existing norms).

9. Once an applicant is found/declared eligible and has a house site then the PDO shall approve and send to EO TPS and Chief Officer who shall approve the same and send to DC Office though RGRHCL software.

10. EO TPS shall counter check that approval of PDO is correct; similarly DC office shall similarly counter check the correctness of Chief Officer/Commissioners approval. EO TPS shall then, send to CEO ZP, login with his approval. The DC shall send with his approval to RGRHCL. This movement is again though RGRHCL software.

11. CEO ZP (for rural applicants) and DC (for Urban applicants) shall approve using their Digital Signature Certificate and send to RGRHCL via software.

12. RGRHCL shall examine compliance of formalities and approve the issuance of work order, which is issued by PDO for rural applicants and Chief Officer/Commissioner for urban applicants.

13. This methodology being demand based, there is no element or requirement for selection of a few from among larger number of eligible beneficiaries or in other words as each and every eligible beneficiary shall be selected and issued work order the element of selection will not be there. Thus,

    a. There is no need for fixing of targets area wise on any criteria under the scheme.
    b. Grama Panchayat can directly approve all eligible applicants.

(ಶಿವಕುಮಾರಸ್ವಾಮಿ ಸಿ.ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ-2
ವಸತಿ ಇಲಾಖೆ.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಕೇಂದ್ರ ಮತ್ತು ರಾಜ್ಯ ಸರ್ಕಾರದ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿರುವ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಸಂಸ್ಥೆಯ ಬಲವನ್ನು ವೃದ್ಧಿಪಡಿಸಲು ತಾತ್ಕಾಲಿಕ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವ ಕುರಿತು.

---0---

ಓದಲಾಗಿದೆ:

ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಇವರ ಪತ್ರ ಸಂಖ್ಯೆ: RGRHCL 20 IAG 87 2017, ದಿನಾಂಕ:04-5-2017.

ಪ್ರಸ್ತಾವನೆ:

ಸರ್ಕಾರವು ಈ ಕೆಳಕಂಡ ವಸತಿ ಯೋಜನೆಗಳನ್ನು ವಸತಿ ಇಲಾಖೆಯ ಅಧೀನದಲ್ಲಿರುವ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು ಸಂಸ್ಥೆಯ ಮೂಲಕ ಅನುಷ್ಠಾನಗೊಳಿಸುತ್ತಿದೆ.

1. ಬಸವ ಗ್ರಾಮೀಣ ವಸತಿ ಯೋಜನೆ
2. ಡಾ. ಬಿ.ಆರ್ ಅಂಬೇಡ್ಕರ್ ನಿವಾಸ್ ಯೋಜನೆ (ನಗರ ಮತ್ತು ಗ್ರಾಮೀಣ)
3. ವಾಜಪೇಯಿ ನಗರ ವಸತಿ ಯೋಜನೆ
4. ದೇವರಾಜ್ ಅರಸು ವಿಶೇಷ ವಸತಿ ಯೋಜನೆ
5. ಗ್ರಾಮೀಣ ಮತ್ತು ನಗರ ನಿವೇಶನ ಯೋಜನೆ
6. ಮುಖ್ಯಮಂತ್ರಿಗಳ ಒಂದು ಲಕ್ಷ ಬೆಂಗಳೂರು ವಸತಿ ಯೋಜನೆ
7. ಪ್ರಧಾನ ಮಂತ್ರಿ ಆವಾಸ್ ಯೋಜನೆ – ಗ್ರಾಮೀಣ

ಈ ಮೇಲೆ ತಿಳಿಸಿದಂತೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ವಸತಿ ಯೋಜನೆಗಳನ್ನು ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಪಂಚಾಯತಿಯ ಮೂಲಕ ಮತ್ತು ನಗರ ಪ್ರದೇಶಗಳಲ್ಲಿ ಸ್ಥಳೀಯ ಸಂಸ್ಥೆಗಳ ಮೇಲ್ವಿಚಾರಣೆಯಲ್ಲಿ ಅನುಷ್ಠಾನ'ಗೊಳಿಸಲಾಗುತ್ತಿದೆ. ಜಿಲ್ಲಾ/ತಾಲ್ಲೂಕು/ನಗರ ಸ್ಥಳೀಯ ಸಂಸ್ಥೆಗಳ ಮತ್ತು ಗ್ರಾಮ ಪಂಚಾಯತಿಗಳ ಮಟ್ಟದಲ್ಲಿ ವಸತಿ ಇಲಾಖೆಯ ಯಾವುದೇ ಸಿಬ್ಬಂದಿಗಳು ಇರುವುದಿಲ್ಲ. ಆದ್ದರಿಂದ ಸರ್ಕಾರದ ವಸತಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತಿಲ್ಲ. ಸರ್ಕಾರವು ಮುಂಬರುವ ವರ್ಷಗಳಲ್ಲಿ ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳ ಭೌತಿಕ ಮತ್ತು ಆರ್ಥಿಕ ಗುರಿಯನ್ನು ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಿಸಲಿದೆ. ಆದ್ದರಿಂದ ಜಿಲ್ಲಾ/ತಾಲ್ಲೂಕು/ನಗರ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ವಸತಿ ಇಲಾಖೆ/ ರಾಜೀವ್ ಗಾಂಧಿ ಗ್ರಾಮೀಣ ನಿಗಮದ ಸಿಬ್ಬಂದಿಗಳನ್ನು ಹೊಂದಲು ಪ್ರಸ್ತಾಪಿಸಲಾಗಿದೆ.

ರಾಜ್ಯದ ಎಲ್ಲ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯು ವಸತಿ ಇಲಾಖೆಯದ್ದಾಗಿರುತ್ತದೆ. ರಾಜ್ಯದಲ್ಲಿ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವಸತಿ ರಹಿತರಿಗೆ ವಸತಿ ಸೌಲಭ್ಯವನ್ನು ಒದಗಿಸುವ ದೃಷ್ಟಿಯಿಂದ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವನ್ನು ಕಂಪನಿ ಕಾಯ್ದೆ ಪ್ರಕಾರ 2000ನೇ ಇಸವಿಯಲ್ಲಿ ಸ್ಥಾಪಿಸಲಾಗಿದ್ದು, ಇದು ಒಂದು ವಿಶೇಷ ಉದ್ದೇಶಕ್ಕಾಗಿ ಸ್ಥಾಪಿತವಾದ ಸಂಸ್ಥೆಯಾಗಿರುತ್ತದೆ.

ವಸತಿ ಯೋಜನೆಗಳ ಮೇಲ್ವಿಚಾರಣೆಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಕೇಂದ್ರ ಕಛೇರಿಯ ಹೊರಗೆ ನಿರ್ವಹಣೆ ಮತ್ತು ಅನುಷ್ಠಾನಕ್ಕಾಗಿ ಯಾವುದೇ ಸಿಬ್ಬಂದಿಯನ್ನು ಹೊಂದಿರುವುದಿಲ್ಲ.

2..

2017-18ನೇ ಸಾಲಿನಲ್ಲಿ ಕರ್ನಾಟಕ ಸರ್ಕಾರವು ರಾಜ್ಯದಲ್ಲಿ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವಸತಿ ರಹಿತರಿಗೆ 4ಲಕ್ಷ ಮನೆಗಳನ್ನು ಪೂರ್ಣಗೊಳಿಸುವ ಮತ್ತು 10ಲಕ್ಷ ಹೊಸ ಫಲಾನುಭವಿಗಳನ್ನು ಆಯ್ಕೆ ಮಾಡುವ ಗುರಿ ಹೊಂದಿದ್ದು, ವಸತಿ ಯೋಜನೆಗಳ ಅನುಷ್ಠಾನವನ್ನು ಬಲವರ್ಧನೆಗೊಳಿಸಲು ಸರ್ಕಾರವು ನಿರ್ಧರಿಸಿದೆ. ಇದನ್ನು ಅನುಷ್ಠಾನಗೊಳಿಸಲು ವಸತಿ ಇಲಾಖೆ ಮತ್ತು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಲ್ಲಿ ಆಡಳಿತ ಮತ್ತು ಕಾರ್ಯನಿರ್ವಹಣೆಯನ್ನು ಮೇಲ್ದರ್ಜೆಗೆ ಏರಿಸುವ ಅವಶ್ಯಕತೆ ಇರುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿ ಸಲಹೆಗಾರರನ್ನು ತಾತ್ಕಾಲಿಕವಾಗಿ ಅಥವಾ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು ಪ್ರಸ್ತಾಪಿಸಲಾಗಿದೆ. ಈ ಪೈಕಿ ಅತಿ ಹೆಚ್ಚು ಸಿಬ್ಬಂದಿಯು ನಗರ ವಸತಿ ಯೋಜನೆಗಳಿಗಾಗಿ ಇಂಜಿನಿಯರಿಂಗ್ ಸಂಪನ್ಮೂಲವನ್ನು ಒಳಗೊಂಡಿದೆ. ಸದರಿ ಸಿಬ್ಬಂದಿಯು ಜಿಲ್ಲಾಧಿಕಾರಿ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಕಚೇರಿಗಳಲ್ಲಿ ಮತ್ತು ಗ್ರಾಮೀಣ ಪ್ರದೇಶದ ವಸತಿ ಯೋಜನೆಗಳ ಅನುಷ್ಠಾನಕ್ಕಾಗಿ ಕಚೇರಿಗಳು ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಹಣಾಧಿಕಾರಿಗಳ ಕಚೇರಿಗಳಲ್ಲಿರಲಿದ್ದು, ಈ ಉದ್ದೇಶಕ್ಕಾಗಿ ಅಂದಾಜು 1649 ವಿವಿಧ ವೃಂದದ ಹುದ್ದೆಗಳಿಗೆ ಸೇರಿದ ಸಿಬ್ಬಂದಿಯ ಅಗತ್ಯವಿದ್ದು, ಅವರ ವೇತನ, ಭತ್ಯೆ ಇತ್ಯಾದಿಗಳಿಗಾಗಿ ರೂ.32.96ಕೋಟಿಗಳನ್ನು ಅಂದಾಜಿಸಲಾಗಿದೆ.

ಸಿಬ್ಬಂದಿಗಳ ನೇಮಕಾತಿಗಾಗಿ ಬೇಕಾಗುವ ವೆಚ್ಚವನ್ನು ಆಯವ್ಯಯದಲ್ಲಿ ಯೋಜನೆಗಳ ಅನುಷ್ಠಾನಕ್ಕಾಗಿ ಒದಗಿಸಲಾಗುವ ಅನುದಾನದ ಶೇ.1ರಷ್ಟನ್ನು ಉಪಯೋಗಿಸಲಾಗುವುದು. 2017-18ನೇ ಸಾಲಿಗೆ ವಸತಿ ಯೋಜನೆಗಳಿಗಾಗಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತಕ್ಕೆ ರೂ.4245.99ಕೋಟಿಗಳನ್ನು ಒದಗಿಸಲಾಗಿದ್ದು, ವೇತನ, ಕೂಲಿ ಮತ್ತು ಇತರೆ ವೆಚ್ಚಗಳನ್ನು ಭರಿಸಲು ಇದರ ಒಂದು ಪ್ರತಿಶತದೊಳಗೆ ಅಂದರೆ ರೂ.42.46ಕೋಟಿಗಳ ಮಿತಿಯೊಳಗೆ ಇಡಲಾಗುವುದು.

ಪ್ರಸ್ತಾಪಿಸಲಾದ ಮಾನವ ಸಂಪನ್ಮೂಲವನ್ನು ಜಿಲ್ಲಾ ಮಟ್ಟದಲ್ಲಿ ವಸತಿ ಯೋಜನೆಗಳ ಅನುಷ್ಠಾನದ ಬಲವರ್ಧನೆಗಾಗಿ 2017-18ನೇ ಸಾಲಿನಿಂದ ತಾತ್ಕಾಲಿಕವಾಗಿ ಮುಂದಿನ 2 ವರ್ಷಗಳ ಕಾಲಾವಧಿಯವರೆಗೆ ಕೆ.ಟಿ.ಪಿ.ಪಿ. ಕಾಯ್ದೆ/ನಿಯಮಗಳನ್ವಯ ತಾತ್ಕಾಲಿಕವಾಗಿ ಸಲಹೆಗಾರರಾಗಿ ಅಥವಾ ಮಾನವ ಸಂಪನ್ಮೂಲ ಸಂಸ್ಥೆಯಿಂದ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡು ನಿಯೋಜಿಸಲಾಗುವುದು. ಇತರೆ ವೆಚ್ಚಗಳಾದ ಕಚೇರಿ, ಸಾರಿಗೆ, ತರಬೇತಿ, ಪ್ರವಾಸ ಇತ್ಯಾದಿಗಳನ್ನು ವಸತಿ ಇಲಾಖೆಯು ಒಟ್ಟು ರಾಜ್ಯ ಸರ್ಕಾರದ ವಸತಿ ಯೋಜನೆಗಳಿಗೆ ಹಂಚಿಕೆಯಾದ ಅನುದಾನದ ಶೇ.1ರ ಪರಿಮಿತಿಯಲ್ಲಿ ಇರುವಂತೆ ನೋಡಿಕೊಂಡು ನಿರ್ಧರಿಸುತ್ತದೆ. ಇದನ್ನು ಅನುಷ್ಠಾನಗೊಳಿಸಲು ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಅನುಷ್ಠಾನಕ್ಕಾಗಿ ನಿಗದಿಪಡಿಸಿರುವ ಮಾರ್ಗಸೂಚಿಗಳು ಮಾದರಿಯಾಗಿರುತ್ತವೆ.

ಅಲ್ಲದೆ, ಪ್ರಸಕ್ತ ಆರ್ಥಿಕ ವರ್ಷದಿಂದ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಆವಾಸ್ ಯೋಜನೆ(ನಗರ)ಯನ್ನು ನಗರಾಭಿವೃದ್ಧಿ ಇಲಾಖೆಯಿಂದ ವಸತಿ ಇಲಾಖೆಗೆ ವರ್ಗಾಯಿಸಲು ಕೋರಲಾಗಿದ್ದು, ಈ ಯೋಜನೆಯನ್ನು ಅನುಷ್ಠಾನಗೊಳಿಸಲು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವನ್ನು ನೋಡಲ್ ಮತ್ತು ಅನುಷ್ಠಾನ ಸಂಸ್ಥೆಯನ್ನಾಗಿ ಮಾಡಲು ಉದ್ದೇಶಿಸಲಾಗಿದೆ.

3...

ದಿನಾಂಕ 02.05.2017ರಂದು ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ವಸತಿ ಇಲಾಖೆಯ ಯೋಜನೆಗಳ ಪರಿಶೀಲನಾ ಸಭೆಯಲ್ಲಿ ವಸತಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅವಶ್ಯಕವಿರುವ ಮಾನವ ಸಂಪನ್ಮೂಲವನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ನೇಮಕ ಮಾಡಿಕೊಳ್ಳಲು ಮತ್ತು ಅದಕ್ಕೆ ತಗಲುವ ವೆಚ್ಚವನ್ನು ಒಟ್ಟಾರೆಯಾಗಿ ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನದ ಶೇಕಡ 1ರಷ್ಟು ಮಿತಿಯೊಳಗೆ ನಿರ್ವಹಿಸಲು ಅನುಮೋದನೆ ನೀಡಲಾಗಿದೆ.

ಈ ಹಿನ್ನೆಲೆಯಲ್ಲಿ ಪರಿಶೀಲಿಸಿ, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಅವಶ್ಯವಿರುವ ಸಿಬ್ಬಂದಿಯನ್ನು ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಈ ಕೆಳಗಿನಂತೆ ಆದೇಶಿಸಿದೆ.

**<u>ಸರ್ಕಾರಿ ಆದೇಶ ಸಂಖ್ಯೆ: ವಇ 11 ಹೆಚ್‌ಎಎಂ 2017, ಬೆಂಗಳೂರು, ದಿನಾಂಕ: 05.06.2017.</u>**

ಮೇಲಿನ ಪ್ರಸ್ತಾವನೆಯ ಹಿನ್ನಲೆಯಲ್ಲಿ, ವಸತಿ ಇಲಾಖೆಯಡಿ ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ವಸತಿ ಯೋಜನೆಗಳನ್ನು ತ್ವರಿತಗತಿಯಲ್ಲಿ ಅನುಷ್ಠಾನಗೊಳಿಸುವುದಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಮತ್ತು ಕೆಳಹಂತದಲ್ಲಿ ಪೂರ್ಣ ಪ್ರಮಾಣದ ಕಾರ್ಯ ನಿರ್ವಹಿಸಲು ಅವಶ್ಯವಿರುವ 1649 ಹುದ್ದೆಗಳನ್ನು ವಾರ್ಷಿಕ ರೂ.29.59 ಕೋಟಿಗಳ ಅಂದಾಜಿನಲ್ಲಿ ಹೊರ ಗುತ್ತಿಗೆ ಆಧಾರದ ಮೇಲೆ ಎರಡು ವರ್ಷಗಳ ಅವಧಿಗೆ ಮಾತ್ರ ಮಾನವ ಸಂಪನ್ಮೂಲ ಏಜೆನ್ಸಿ ಮೂಲಕ ತಾತ್ಕಾಲಿಕವಾಗಿ ಕೆ.ಟಿ.ಪಿ.ಪಿ. ಕಾಯ್ದೆ/ ನಿಯಮಗಳನ್ವಯ ನೇಮಕ ಮಾಡುವುದು ಹಾಗೂ ಯಾವ ಕಾರಣಕ್ಕೂ ಈ ಹುದ್ದೆಗಳನ್ನು ಎರಡು ವರ್ಷಗಳ ನಂತರ ಮುಂದುವರೆಸುವಂತಿಲ್ಲ. ಸದರಿ ಉದ್ದೇಶಕ್ಕಾಗಿ ವೆಚ್ಚವನ್ನು ವಸತಿ ಇಲಾಖೆಯ ವಸತಿ ಯೋಜನೆಗಳಿಗಾಗಿ ವಾರ್ಷಿಕ ಆಯವ್ಯಯದಲ್ಲಿ ಒದಗಿಸುವ ಅನುದಾನ ಮೊತ್ತದ ಶೇ.1ರಷ್ಟು ಮೊತ್ತದಿಂದ (2017-18ನೇ ಸಾಲಿಗೆ ರೂ.42.46ಕೋಟಿಗಳಿಂದ) ಭರಿಸತಕ್ಕದ್ದು.

ನಗರ ವಸತಿ ಯೋಜನೆಗಳಿಗಾಗಿ ಜಿಲ್ಲಾಧಿಕಾರಿ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಕಚೇರಿಗಳಿಗಾಗಿ ಅವಶ್ಯವಿರುವ ಸಿಬ್ಬಂದಿಯ ವಿವರವನ್ನು ಅನುಬಂಧ-1ರಲ್ಲಿ ಹಾಗೂ ಗ್ರಾಮೀಣ ಪ್ರದೇಶದ ವಸತಿ ಯೋಜನೆಗಳ ಅನುಷ್ಠಾನಕ್ಕಾಗಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಚೇರಿ ಮತ್ತು ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಕಚೇರಿಗಳಲ್ಲಿ ಅವಶ್ಯವಿರುವ ಸಿಬ್ಬಂದಿಗಳ ವಿವರವನ್ನು ಅನುಬಂಧ-2ರಲ್ಲಿ ಮತ್ತು ಒಟ್ಟು ಸಿಬ್ಬಂದಿ ಹಾಗೂ ವೇತನದ ವಿವರವನ್ನು ಅನುಬಂಧ-3ರಲ್ಲಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

(ಶಿವಕುಮಾರಸ್ವಾಮಿ.ಸಿ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ-2,
ವಸತಿ ಇಲಾಖೆ.

<u>ಇವರಿಗೆ:</u>

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ) (ಇ&ಆರ್‌ಎಸ್‌ಎ), ಕರ್ನಾಟಕ ಬೆಂಗಳೂರು.
2) ಮಹಾಲೇಖಪಾಲರು(ಎ&ಇ) ಕರ್ನಾಟಕ ಬೆಂಗಳೂರು.
3) ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು.
4) ಆಯುಕ್ತರು, ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು.

5) ಎಲ್ಲಾ ಜಿಲ್ಲಾಧಿಕಾರಿಗಳು.
6) ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
7) ಎಲ್ಲಾ ಕಾರ್ಯನಿರ್ವಹಣಾಧಿಕಾರಿಗಳು.

} ವ್ಯ.ನಿ.,ರಾ.ಗಾಂ.ಗ್ರಾ.ವ.ನಿ.ನಿ. ಇವರ ಮುಖಾಂತರ ಹೊರಡಿಸುವುದು.

8) ಶಾಖಾ ರಕ್ಷಾ ಕಡತ/ಹೆಚ್ಚಿನ ಪ್ರತಿಗಳು.

<u>ಪ್ರತಿ ಮಾಹಿತಿಗಾಗಿ:</u>

1) ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
2) ಮಾನ್ಯ ವಸತಿ ಸಚಿವರ ಆಪ್ತ ಕಾರ್ಯದರ್ಶಿ.
3) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ(ಸಚಿವರ ಸಂಪುಟ ಪ್ರಕರಣ ಸಂಖ್ಯೆ: ಸಿ-315/2017 ರ ಮಾಹಿತಿಗಾಗಿ), ವಿಧಾನಸೌಧ, ಬೆಂಗಳೂರು.
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5) ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಆರ್ಥಿಕ ಇಲಾಖೆ. ವಿಧಾನ ಸೌಧ.
6) ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಸತಿ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
7) ಜಂಟಿ ನಿರ್ದೇಶಕರು, (ಯೋಜನೆ), ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ.
8) ಸರ್ಕಾರದ ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರು.

<u>ಅನುಬಂಧ-1</u>

(ಸರ್ಕಾರದ ಆದೇಶ ಸಂಖ್ಯೆ: ವಇ 11 ಹೆಚ್‌ಎಎಂ 2017, ದಿನಾಂಕ:05.06.2017ಕ್ಕೆ)

## URBAN

| Sl. No. | Designation and payment (Per month) | Minimum Qualification (Age limit) | Location | Number/Location | Job chart | Funding Source |
|---|---|---|---|---|---|---|
| 1 | Housing Engineer (EE rank) (Rs.40000) | Degree in Civil Engg. With at least 10 yrs work experience (retired engg. also accepted but must have retired Minas Executive Engg) (65 years) | DC Office | 1 | 1. All Housing for All'. Engineering & related matters- estimates DPR, tenders, supervision, billing payment etc. 2. All other housing work & connected matters 3. Any & all works assigned by DC as regards housing | PMAY(U) - HFA+ State Urban Schemes |
| 2 | Deputy Engineer (AE rank) (Rs25000) | Degree in Civil Engg. with at least 3 yrs work experience (45 years) | DC Office | 1 | -do- | -do- |
| 3. | Section Officer @ one per 300 DU in Group AHP (Rs. 20000-degree & Rs 18000-diploma) | Degree in Civil Engg (1st perfrence or Diploma in Civil (if degree holder not available) 45 yrs | DC Office | One per 300 DU in AHP/ Group House (at least one) | -do- | -do- |
| 4 | Account & Finance Specialist (Rs. 30000) | 1. Degree in Commerce MBA or (finance or retired from rank of chief Accounts officer in ZP or equivalent . 2. Minimum 5 year work experience (65 years) | DC Office | 1 | 1. All accounts & finances of PMAY (U)-HFA & other Housing programmes. 2. All payments of scrutiny of bills & accounts. 3. Financial evaluating of DPRs & other activities. 4. All & any housing work assigned by DC. | -do- |
| 5 | Accounts & Finance Assistant (Rs. 20000) | Degree in commerce with computer knowledge (45 years) | DC office | 1 | -do – PLUS all cash book, financial ledger writing | -do- |
| 6 | Social & Community specialist (Rs. 25000) | 1.Graduate or degree holder. 2 Minimum 2 yrs experience 3. Computer knowledge with minimum typing speed of 35 words per minute (either Kannada or English) | DC Office | 1 | 1.Beneficiary support co-ordination, grievances & complaints. 2. Training, capacity building & IEC. 3. All any housing work assigned by DC | -do- |
| 7 | MIS specialist (Rs30000) | Degree in (Com. Se & Engg) or (Electronics) or (Mct wide 2 yrs experience) (45 yrs) | DC office | 1 | 1. All software Mobile app & related work. 2.MIS reporting e payment tracking, Gps tacking. 3. Aaadar sealing, integration with other software or hardware issues. 4. All as any work in housing assigned by DC | -do- |

| | | | | | | |
|---|---|---|---|---|---|---|
| 8 | Data Entry operator Rs.15000) | 1. Puc with computer knowledge (test will be taken), 2. Minimum computer typing speed of 30 wpm ( in English or Kannada) 40 yrs | DC Office | 3 | 1.All computer entry & such work of housing. 2. Master Trainer. 3. All or any work in housing assigned by DC | -do- |
| 9 | Data Entry operator Rs.15000) | - do - | ULB | One per ULB | -do- | -do- |
| 10 | Field Assistant (Rs15000) | Puc with computer knowledge (45 Years) | ULB | @ One per ULB | 1.All field work in ULB including GPS, house visit surveys, verification. 2. All or any work assigned for housing by DC for chief officer of Municipality | -do- |
| 11 | System Analyst (Computer Programmer and Tester) | Degree in Engineering (Computer Science or Electronics) or Master in Computer Application | RGRHCL, Bengaluru | 10 | Develop and maintain RGRHCL Software | -do- |

(ಶಿವಕುಮಾರಸ್ವಾಮಿ.ಸಿ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ-2,
ವಸತಿ ಇಲಾಖೆ.

ಅನುಬಂಧ-2

(ಸರ್ಕಾರದ ಆದೇಶ ಸಂಖ್ಯೆ: ವಇ II ಹೆಚ್‌ಎಎಂ 2017, ದಿನಾಂಕ:05.06.2017ಕ್ಕೆ)

RURAL

| Sl. No | Designation and payment (Per month) | Minimum Qualification (Age limit) | Special Qualification | Location | Number per location | Job Chart | Funding Source |
|---|---|---|---|---|---|---|---|
| 1 | Manager (Rs.35,000/-) | (i) Engineering Degree or MCA (ii) at least 2 years' work experience (iii) Not more than 50 year in age | Minimum typing speed of 30 (either English or Kannada) and Computer Knowledge | CEO ZP Office | One each at CEO Office | (1) Administrative and technical support for implementation of housing schemes (2) Mobile App support and full software support (3) Monitoring and Supervision in field with at least 100 house visits per month (4) At lest 10 days touring (5) Supvervise conduct of grama sabhas, data enty and all approvals follow-up until workorders are issued in time bound manner (6) Training & Capacity Building (7) Any other duty assigned for housing schemes/purposes. | PMAY (G) + State Rural Schemes |
| 2 | Assistant Manager (Rs.20,000/-) | (i) BE/Btech degree in any discipline or MCA or BCA or Diploma in Civil or Electonics (ii) Not more than 45 years in age | Minimum typing speed of 30 (either EngliSh or Kannada) and Computer Knowledge | Taluk EO Office | One per Taluk | (1) Administrative and technical support & supervision of implementation of housing schemes (2) Mobile App support and full software support (3) Monitoring and supervision in field with 100% house visits in taluk at least once in 2-months including ensuring documentation (4) At lest 15 days touring (5) Support to conduct grama sabhas, data entry supervision and all approvals follow-up until issuance of workorder and then implementation (6) Training & Capacity Building (7) One day per week shall work for the urban housing schemes (8) Any other duty assigned for housing schemes/purposes. | -do- |
| 3. | Field Assistant (Rs 12000) | PUC with computer knowledge (45 Years) | Nil | Taluk EO Office | 3-5 per Taluk depending upon number of Gram Panchayats | 1.All field work in Gram Panchayat including GPS, house visit surveys, verification. 2. All or any work assigned for housing by CEO or EO TPS. | -do- |

(ಶಿವಕುಮಾರಸ್ವಾಮಿ.ಸಿ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ-2,
ವಸತಿ ಇಲಾಖೆ.